ಕೆ.ಎಸ್. ನಾರಾಯಣರೆಡ್ಡಿ, ಕೆ.ಜಿ.ಎಫ್.
ಆಸ್ತಿಕನಾದವನು ಬೆಳಿಗ್ಗೆ ಎದ್ದು ದೇವರ ಮುಖ ನೋಡುತ್ತಾನೆ; ನಾಸ್ತಿಕ?



ಕನ್ನಡಿಯನ್ನು; ಜಗದಲ್ಲಿ ಈ ಬಡಪಾಯಿಗೆ ತನಗೆ ತಾನೇ ಆಧಾರವಲ್ಲವೇ!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
ಇಲ್ಲೊಬ್ಬರು ಹೊಸಮನೆಗೆ ದಂಪತಿನಿವಾಸ ಎಂದು ಹೆಸರಿಟ್ಟಿದ್ದಾರೆ?
ಇನ್ನೂ ಮಕ್ಕಳಾಗಿಲ್ಲವೇನೋ..!

ಜೆ. ಸುಬ್ಬನಾಯಕ, ಬೊಮ್ಮಲಾಪುರ
ಪ್ರತಿ ಜನ್ಮದಿನವೂ ಸಾವಿಗೆ ಸಮೀಪವಾಗಿರುವಾಗ ಅದಕ್ಕೆ ಸಡಗರದ ಆಚರಣೆಯೇಕೆ?
ಅಂದಿನವರೆಗೂ ಸತ್ತಿಲ್ಲದಿರುವುದಕ್ಕೆ ಸಂತಸ ಸೂಚಿಸಲು!

ರವಿಕಾಂತ, ತುಮಕೂರು
ಸಾರ್, ತಾವು ರಾಜ್ಯದ ಎಲ್ಲಾ ಭಾಗದ ಓದುಗರ ಪ್ರಶ್ನೆಗಳಿಗೆ ಚುಟುಕಾಗಿ ಉತ್ತರಿಸಿರುವಿರಿ. ನೀವೇಕೆ ಈ ಬಾರಿ ರಾಜ್ಯೋತ್ಸವ ಪ್ರಶಸ್ತಿಗೆ ಅರ್ಜಿ ಗುಜರಾಯಿಸಬಾರದು?




ಬೇಡಿ ಪಡೆಯುವ ಪ್ರಶಸ್ತಿಗಿಂತಲೂ ನಿಮ್ಮಂತಹ ಓದುಗರ ಪ್ರಶಂಸೆಯೇ ಶ್ರೇಷ್ಠ!

ಎ.ಎಸ್.ಸ್ವಾಮಿ, ಶೋರಾಪುರ
ಬಾಲಕಾರ್ಮಿಕ ಪದ್ಧತಿಯ ನಿರ್ಮೂಲನೆ ಹೇಗೆ?
ಸಾಧ್ಯವಿಲ್ಲ. ರಾಮಾಯಣದಲ್ಲೂ ಸೇತುವೆ ಕಟ್ಟಿದವರೆಲ್ಲಾ ಬಾಲ ಕಾರ್ಮಿಕರೇ! ಅದು ನಮ್ಮ ಪರಂಪರೆ!

ಡಿ.ಎಲ್.ನಾಗರಾಜ್, ಹರಪನಹಳ್ಳಿ
ಹಣಬಲ, ತೋಳ್ಬಲ, ಜಾತಿ ಬಲದಿಂದ ಗೆಲ್ಲುವ ಜನ ಅದೆಷ್ಟರ ಮಟ್ಟಿಗೆ ಜನಪ್ರತಿನಿಧಿಗಳಾಗಿರುತ್ತಾರೆ?
ಜನರ ಪ್ರತಿ ನಿಧಿಯನ್ನೂ ತಲುಪುವಷ್ಟರಮಟ್ಟಿಗೆ!

ಎಂ.ಜಿ.ನೇಹವರ್ಷಿಣಿ, ಬಳ್ಳಾರಿ
ವಾರಂಟ್‌ಗೂ, ಕರೆಂಟ್‌ಗೂ ಏನು ವ್ಯತ್ಯಾಸ?
ವಾರಂಟ್ ಬರುತ್ತದೆ, ಕರೆಂಟ್ ಹೋಗುತ್ತದೆ.

ಕೇಶವ ಎನ್ ಪೈ, ಹೊನ್ನಾವರ
ಮುಂದಿನ ಪೀಳಿಗೆಗೆ ನಮ್ಮ ಬಳುವಳಿ ಏನು?
ನನ್ನದೇನೋ ಮೂರು ಮಕ್ಕಳು; ನಿಮ್ಮದು?

ಪಿ. ಗೋವಿಂದರಾಜ್, ಶಿವಮೊಗ್ಗ
ನನ್ನವಳು ಮುಟ್ಟಿದ್ದೆಲ್ಲಾ ಚಿನ್ನ. ಹೀಗಾದರೆ ನಮ್ಮ ಸಂಸಾರ ಹೇಗೆ?
ಚಿನ್ನದಂತಹ ಸಂಸಾರವಾಗುವುದಲ್ಲಾ! ಬೇಡವೆನಿಸಿದರೆ ಕೈಗೆ ಗ್ಲೌಸ್ ತೊಡಿಸಿಬಿಡಿ!

ವಿ.ಎಸ್. ಹಿಂದೂಪುರ, ಬಳ್ಳಾರಿ
ಬಡತನ ಮತ್ತು ಸಾಲ, ಇವೆರಡರಲ್ಲಿ ಯಾವುದು ಭಯಾನಕ?
ಸಾಲ ಮನ್ನಾ ಆಗುತ್ತದೆ; ಬಡತನವೇ ಭಯಾನಕ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
ಹಳೆಗನ್ನಡ, ಹೊಸಗನ್ನಡ, ನಡುಗನ್ನಡಗಳಾದವು; ಎಫ್.ಎಂ. ಕನ್ನಡದ ಬಗ್ಗೆ ಏನು ಹೇಳುತ್ತೀರಿ?
ಅದು ನಡುವಿನ ಕೆಳಗಿನ ಕನ್ನಡ! ಕನ್ನಡದ ಕೊಲೆಯೇ ಏಕೈಕ ಗುರಿಯಾಗಿರುವವರ ಭಾಷೆ!

ಪಿ.ಎಸ್. ಶ್ರೀವತ್ಸ, ಬೆಂಗಳೂರು
ಮೌಲ್ಯಾಧಾರಿತ ರಾಜಕಾರಣ: ಇದರ ಬಗ್ಗೆ ಎರಡು ಮಾತು ಹೇಳಿ...?
ರೇಟ್ ಎಷ್ಟು?

ಬಿ.ಎಸ್.ರಾಜಣ್ಣ, ಕೆರೆಕಮತ್ತಿ
ಪತಿವ್ರತೆಯರು ಯಾರ್‍ಯಾರು ಎಂದರೆ ತಮ್ಮ ಹೆಂಡತಿಯ ಹೆಸರನ್ನು ಯಾರೂ ಹೇಳದಿರುವ ಕಾರಣವೇನು ರಾಮ್ ಸಾಹೇಬ್?
ಮಾನವಪ್ರವೃತ್ತಿಯೇ ಹಾಗೆ; ಕೈಗೆಟುಕುವ ಚಿನ್ನ ಕಸಕ್ಕೆ ಸಮಾನ!

ಬಸವರಾಜ ಹೊನಖಾಂಡೆ, ಅಥಣಿ
ದೇಗುಲಗಳ ಬಾಗಿಲುಗಳು ಏಕೆ ಚಿಕ್ಕದಾಗಿರುತ್ತವೆ?
ತಲೆಯಮೇಲೆ ಹೊತ್ತೊಯ್ಯುವಷ್ಟು ಲೂಟಿ ನಡೆಯದಿರಲೆಂದು!

## ಬಹುಮಾನಿತ ಪ್ರಶ್ನೆ

ಎಸ್. ಗೋಪಾಲರಾವ್, ಬೆಂಗಳೂರು
ಇಸ್ಪೀಟ್ ಆಟದಲ್ಲಿ ರಾಜ-ರಾಣಿಯ ನಂತರ ಮಂತ್ರಿ-ಸೇನಾಪತಿಗಳಿಗಲ್ಲದೆ ಗುಲಾಮನಿಗೆ ಸ್ಥಾನವೇಕೆ?
ಗುಲಾಮ ಎಲ್ಲಾ ಕಡೆಗಳಲ್ಲೂ ಹೊಂದಿಕೊಳ್ಳುವವನಾದ್ದರಿಂದ!

ಎಸ್. ಶ್ರೀಧರ, ದಾವಣಗೆರೆ
ಸಂಭಾಷಣೆಯು ಸುಸಂಸ್ಕೃತಿಯ ಅಭಿವ್ಯಕ್ತಿಯಾಗಲು ಹೇಗೆ ನಡೆದರೆ ಸಾಧ್ಯ?
ಅರಿ(ಶತ್ರು)ಯಿರದಂತೆ, ಅರಿವಿರುವಂತೆ, ಅರಿವಂತೆ!

ಕೆ.ವಿ. ಶಿವಕುಮಾರ್, ಕಾಳೀಹುಂಡಿ
ಪ್ರೀತಿಯ ಆರಂಭ ನೋಟದಿಂದಲೋ, ನೋಟಿನಿಂದಲೋ?
ಮಗು ಗರ್ಭದಲ್ಲಿರುವಾಗಲೇ ತಾಯಿಯ ಪ್ರೀತಿ ಆರಂಭ; ಪ್ರೀತಿ ನೋಟ, ನೋಟು ಎರಡನ್ನೂ ಮೀರಿದ್ದು.

ಶಿವಮೊಗ್ಗ ರಮೇಶ್, ಮೈಸೂರು
ತುಂಡು ಬಟ್ಟೆ ಧರಿಸಿ ಜಾಹಿರಾತು ನೀಡಿದ ನಟಿ ತಾನು ಅನಗತ್ಯ ಮೈ ಪ್ರದರ್ಶನಕ್ಕೆ ವಿರೋಧಿ ಎಂದಿರುವಳಲ್ಲ?



ಸರಿಯೇ. ಜಾಹಿರಾತಿಗೆ, ರಸಿಕರಿಗೆ, ನಿರ್ದೇಶಕರಿಗೆ, ನಿರ್ಮಾಪಕರಿಗೆ, ವಾಹಿನಿಗಳಿಗೆ, ಪತ್ರಿಕೆಗಳಿಗೆ... ಅಗತ್ಯವಿದ್ದಾಗ ಮಾತ್ರ ಮೈ ಪ್ರದರ್ಶನವಂತೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ವಾಹನಕ್ಕೆ ಒನ್‌ವೇ ಇದ್ದಂತೆ ಪ್ರೀತಿಗೆ ಒನ್‌ವೇ ಇದ್ದರೆ?
ಎಷ್ಟೋ ಹದಿಹರೆಯದವರ ಪ್ರೀತಿ ಇರುವುದೇ ಒನ್‌ವೇ ಆಚಾರ್ರೇ!

■ ರಾಮ್